# ದೇವದಾಸಿ ಪದ್ಧತಿ ನಿರ್ಮೂಲನೆಯಲ್ಲಿ ಅಂಬೇಡ್ಕರ್ ಅವರ ಪಾತ್ರ

**ಮೌನೇಶ್ವರಿ ಮಹೇಶ ಕರೆಮ್ಮನವರ**

ಉಪನ್ಯಾಸಕಿ, ಸಮಾಜಶಾಸ್ತ್ರ ವಿಭಾಗ, ಶ್ರೀ ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ನವಲಗುಂದ.

DOI: https://doi.org/10.5281/zenodo.17805974

## ABSTRACT:

ಪ್ರಸ್ತುತ ಲೇಖನವು ದೇವದಾಸಿ ಪದ್ಧತಿಯ ಐತಿಹಾಸಿಕ ಮತ್ತು ಸಾಮಾಜಿಕ ಮೂಲಗಳನ್ನು ವಿಶ್ಲೇಷಿಸುತ್ತದೆ, ಪ್ರಾಚೀನ ಗ್ರಂಥಗಳಲ್ಲಿನ ವಿವಿಧ ಪ್ರಕಾರಗಳ ದೇವದಾಸಿಯರ ಉಲ್ಲೇಖದೊಂದಿಗೆ ಆರಂಭಿಸುತ್ತದೆ. ಇದು ಓಕಳಿ ಹಬ್ಬಕ್ಕೂ ದೇವದಾಸಿ ಪದ್ಧತಿಗೂ ಇರುವ ನೈಜ ಸಂಬಂಧವನ್ನು, ವಿಶೇಷವಾಗಿ ದಲಿತ ಮಹಿಳೆಯರ ಮೇಲಿನ ಲೈಂಗಿಕ ದಬ್ಬಾಳಿಕೆಯ ರೂಪವನ್ನು, 'ಅರಗಿಣಿ' ಚಲನಚಿತ್ರದ ಉದಾಹರಣೆಯೊಂದಿಗೆ ಹೊರಗೆಡಹುತ್ತದೆ. ಅಂಬೇಡ್ಕರ್ ಅವರು ಈ ಪದ್ಧತಿಯನ್ನು ಹಿಂದೂ ಧರ್ಮದ ಪಿತೃಪ್ರಧಾನ ಮತ್ತು ತಾರತಮ್ಯದ ಸ್ವರೂಪದ ಅಭಿವ್ಯಕ್ತಿ, ಮತ್ತು ಮಹಿಳೆಯರನ್ನು ವೇಶ್ಯಾವೃತ್ತಿಗೆ ತಳ್ಳುವ ಗುಲಾಮಗಿರಿಯ ರೂಪ ಎಂದು ತೀವ್ರವಾಗಿ ಟೀಕಿಸಿದ್ದಾರೆ. ಸಮಾನತೆ ಮತ್ತು ಸ್ವಾತಂತ್ರ್ಯದ ಅವರ ದೃಷ್ಟಿಕೋನವು ಈ ಪದ್ಧತಿಯನ್ನು ರದ್ದುಗೊಳಿಸಲು ನಡೆದ ಚಳುವಳಿಗೆ ಮಹತ್ವದ ಪ್ರಭಾವ ಬೀರಿದೆ. ಅಂತಿಮವಾಗಿ, ಮದ್ರಾಸ್ (1947) ಮತ್ತು ಕರ್ನಾಟಕ (1982) ಸೇರಿದಂತೆ ವಿವಿಧ ರಾಜ್ಯ ಕಾಯಿದೆಗಳ ಮೂಲಕ ಈ ಪದ್ಧತಿಯ ನಿರ್ಮೂಲನೆಗೆ ಕಾನೂನು ಕ್ರಮಗಳನ್ನು ವಿವರಿಸುತ್ತದೆ.

## KEYWORDS:

ದೇವದಾಸಿ ಪದ್ಧತಿ, ಅಂಬೇಡ್ಕರ್, ಓಕಳಿ ಹಬ್ಬ, ಸಾಮಾಜಿಕ ಸುಧಾರಣೆ, ಸ್ತ್ರೀ ಸಮಾನತೆ.

**ಪೀಠಿಕೆ:**

ದೇವಾಲಯಗಳಲ್ಲಿ ದೇವರುಗಳಿಗೆ ವಿಭಿನ್ನ ರೀತಿಯ ಸೇವೆಯನ್ನು ಮಾಡಲು ಅರ್ಪಿಸಲಾಗಿರುವ ಯುವತಿಯರನ್ನು ದೇವದಾಸಿಯರೆಂದು ಕರೆಯಲಾಗುತ್ತಿತ್ತು. ಈ ಯುವತಿಯರು ಭಗವಂತನ ದಾಸಿಯರಾದ್ದರಿಂದ ಮಂದಿರವನ್ನು ಶುದ್ಧಗೊಳಿಸುವುದು, ದೀಪ ಬೆಳಗಿಸುವುದು ಹಾಗೂ ದೇವರ ಪ್ರತಿಮೆಯ ಸಮ್ಮುಖದಲ್ಲಿ ಭಕ್ತಿಪೂರ್ವಕವಾಗಿ ಗಾಯನ, ನರ್ತನ ಮೊದಲಾದ ನಿಶ್ಚಿತ ಕಾರ್ಯಗಳನ್ನು ಮಾಡುವುದು ಇವುಗಳ ಮೂಲಕ ದೇವರ ಸೇವೆಯನ್ನು ನೆರವೇರಿಸುತ್ತಿದ್ದರು. ಈ ಸಂಪ್ರದಾಯ ಜೀವಂತವಾಗಿರುವ ಕಡೆಗಳಲ್ಲಿ ಜನ ದೇವದಾಸಿಯರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಪುಣ್ಯದ ಕಾರ್ಯವೆಂದು ನಂಬುತ್ತಿದ್ದರು. ದೇವಪೂಜೆಯ ಸಂದರ್ಭದಲ್ಲಿ ಸಂಗೀತಕ್ಕಾಗಿ ಸ್ತ್ರೀಯರನ್ನು ನೇಮಿಸಿಕೊಳ್ಳಬೇಕೆಂದು ಹಲವು ಪುರಾಣಗಳು ಹೇಳುತ್ತವೆ. ಈ ಸ್ತ್ರೀಯರು ಸಾಮಾನ್ಯವಾಗಿ ಅದರಲ್ಲಿಯೂ ಕೆಳಜಾತಿಯ ಮಹಿಳೆಯರನ್ನು ವೇಶ್ಯೆಯರನ್ನಾಗಿ ಮಾಡುತ್ತಿದ್ದರು. ಇವರನ್ನು ದೇವಸ್ಥಾನಗಳಿಗಾಗಿ ಕೊಂಡುಕೊಳ್ಳಬೇಕೆಂದು ಕೆಲವು ಪುರಾಣಗಳು ಸೂಚಿಸುವುದು ವಿಷಾದನೀಯ.

**ದೇವದಾಸಿಯರ ವಿಧಗಳು: ಪ್ರಾಚೀನ ಹಿಂದೂ ಗ್ರಂಥಗಳಲ್ಲಿ ಏಳು ವಿಧದ ದೇವದಾಸಿಯರ ಉಲ್ಲೇಖ ಸಿಗುತ್ತದೆ.**

1. ದತ್ತಾ: ತನ್ನನು ತಾನೇ ಯಾವುದಾದರೂ ದೇವಾಲಯವೊಂದಕ್ಕೆ ಅರ್ಪಿಸಿಕೊಂಡವಳು.
2. ವಿಕ್ರೀತಾ : ದೇವಾಲಯದ ಸೇವಾಕಾರ್ಯಗಳಿಗಾಗಿ ತನ್ನನ್ನೇ ಮಾರಿಕೊಂಡವಳು.
3. ಭೃತ್ಯಾ : ತನ್ನ ಕುಟುಂಬದವರ ಪೋಷಣೆಯ ಸಲುವಾಗಿ ದೇವದಾಸಿಯಾದವಳು.
4. ಭಕ್ತಾ : ಕೇವಲ ಭಕ್ತಿಭಾವಗಳಿಂದ ಪ್ರೇರಿತಳಾಗಿ ದೇವಾಲಯವನ್ನು ಪ್ರವೇಶಿಸಿದಳು.
5. ಹೃತಾ : ಅಪಹರಿಸಿಕೊಂಡು ತಂದ ಹೆಣ್ಣನ್ನು ದೇವಾಲಯಕ್ಕೆ ಉಡುಗರೆಯಾಗಿ ಬಂದವಳು.
6. ಅಲಂಕಾರಾ : ರಾಜ ಅಥವಾ ಮಂತ್ರಿ ಯಾವ ಯುವತಿಯನ್ನು ಅಲಂಕರಿಸಿ ದೇವಾಲಯಕ್ಕೆ ಒಪ್ಪಿಸಲಾಗುತ್ತಿತ್ತು.
7. ರುದ್ರಗಣಿಕಾ ಅಥವಾ ಗೋಪಿಕಾ : ನಿಯಮಿತ ವೃತ್ತಿ ಅಥವಾ ವೇತನ ಪಡೆದು ನಾಟ್ಯ, ಗಾಯನ ಮೊದಲಾದ ಕೆಲಸಗಳನ್ನು ನಿರ್ವಹಿಸುವವಳು.

ಪ್ರಾರಂಭ ಕಾಲದಲ್ಲಿ ರಂಗಭೋಗದ ಅಂಗವಾಗಿ ಸ್ತ್ರೀಯರೊಡನೆ ರಂಗಭೋಗದ ಅಂಗವಾಗಿ ಸ್ತ್ರೀಯರೊಡನೆ ಪುರುಷರೂ ನರ್ತಿಸುತ್ತಿದ್ದರೆಂದು ತಿಳಿದು ಬರುತ್ತದೆ. ಪುರುಷರೂ ದೇವರಿಗೆ ದಾಸರಾಗುವ ಸಂಪ್ರದಾಯ ಇಂದಿಗೂ ಬೆಳಗಾಂವಿ ಸಮೀಪದ ಸವದತ್ತಿ ಎಲ್ಲಮ್ಮನ ಗುಡಿಯಲ್ಲಿ ಕಂಡುಬರುತ್ತದೆ. ಎಲ್ಲಮ್ಮನ ಸೂಳಿ, ಎಲ್ಲಮ್ಮನ ಸೂಳಿ, ಬಸವಿ, ಜೋಗಿತಿ ಹೀಗೆ ಮುಂತಾದ ಹೆಸರುಗಳಲ್ಲಿ ಅವರನ್ನು ಕರೆಯುತ್ತಾರೆ. ಪುರುಷರನ್ನೂ ಎಲ್ಲಮ್ಮನ ಜೋಗತಿ ಬಿಡುವ ಸಂಪ್ರದಾಯ ವೀರಶೈವ ಧರ್ಮದ "ಶರಣ ಸತಿ ಲಿಂಗ ಪತಿ" ಎಂಬ ಮಾತನ್ನು ಅತಿಶಯಗೊಳಿಸಿದರ ಪರಿಣಾಮವಾಗಿ ಹುಟ್ಟಿಕೊಂಡಿತೆಂದು ಕಾಣುತ್ತದೆ.

**ಓಕಳಿ ಹಬ್ಬಕ್ಕೂ ಹಾಗೂ ದೇವದಾಸಿ ಪದ್ಧತಿಗೂ ಇರುವ ಸಂಬಂಧ:**

ಹಿಂದೂಗಳು ಹೋಳಿ ಹಬ್ಬಕ್ಕೆ ತಮ್ಮದೇ ಆದ ವೈವಿಧ್ಯಮಯ ಹಿನ್ನಲೆಯನ್ನು ನೀಡಿದ್ದಾರೆ. ಇದು ಹೆಚ್ಚಾಗಿ ಉತ್ತರ ಭಾರತದಲ್ಲಿ ಅತಿ ಸಡಗರ ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಫಾಲ್ಗುಣ ಮಾಸದ ಶುಕ್ಲ ಪಕ್ಷದ ಪೂರ್ಣಿಮೆಯಂದು ಸಾಮಾನ್ಯವಾಗಿ ಓಕಳಿ ಹಬ್ಬವು ಆಚರಿಸಲ್ಪಡುತ್ತದೆ. ವಿಶೇಷವಾಗಿ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರ ಸೇರಿದಂತೆ ಹಲವು ಉತ್ತರ ಭಾರತದ ಭಾಗಗಳಲ್ಲಿ ಇದು ಕಾಮದಹನ ಹಬ್ಬವಾಗಿಯೂ ಸಹ ಗುರುತಾಗಿದೆ. ಬಣ್ಣದ ಹಬ್ಬದ ದಿನವನ್ನು ಕಾಮದಹನವನ್ನಾಗಿ ಆಚರಿಸಲಾಗುತ್ತದೆ.

ಪುರಾಣದ ಕಥೆ: ಪುರಾಣದಂತೆ ಹಿಂದೆ ತಾರಕಾಸುರನೆಂಬ ಅಸುರನಿದ್ದ. ಅತ್ಯಂತ ಬಲಶಾಲಿಯಾಗಿದ್ದ ಆತ ಕಠಿಣ ತಪವನ್ನು ಮಾಡಿ ತನ್ನ ಮೃತ್ಯುವು ಶಿವನಿಂದ ಜನಿಸಿದ ಏಳು ದಿನಗಳ ಮಗುವಿನಿಂದಾಗಲಿ ಎಂಬ ವರವನ್ನು ಪಡೆದಿದ್ದ. ಈ ಸಂದರ್ಭದಲ್ಲಿ ಶಿವನು ಯೋಗ ಸಮಾಧಿಯಲ್ಲಿ ಲೀನವಾಗಿದ್ದ ಮತ್ತು ಪಾರ್ವತಿಯೊಡನೆ ಸಮಾಗಮ ಹೊಂದಲಾರದ ಸ್ಥಿತಿಯಲ್ಲಿದ್ದ. ಇದನ್ನರಿತ ಆ ಅಸುರ ತನಗೆ ಇನ್ನೆಂದೂ ಮೃತ್ಯು ಬರಲಾಗದೆಂದು ಅಹಂಕಾರದಿಂದ ಮೆರೆಯುತ್ತಾ ಎಲ್ಲರನ್ನೂ ಹಿಂಸಿಸತೊಡಗಿದ. ಇತ್ತ ದೇವಲೋಕದ ಎಲ್ಲ ದೇವತೆಗಳು ಬ್ರಹ್ಮ ಮತ್ತು ವಿಷ್ಣು ಬಳಿ ತೆರಳಿ ಸಲಹೆ ಪಡೆದು ಕೊನೆಗೆ ರತಿ–ಮನ್ಮಥ ದಂಪತಿಗಳನ್ನು ಭೇಟಿ ಮಾಡಿ ಅವರನ್ನು ಕುರಿತು ತಮಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದರು. ಲೋಕ ಕಲ್ಯಾಣದ ಪ್ರಯುಕ್ತ ಆ ದಂಪತಿಗಳು ತಮ್ಮ ಸಮ್ಮತಿ ಸೂಚಿಸಿ ಶಿವನ

ತಪಸ್ಸನ್ನು ತಮ್ಮ ಕಾಮದ ಬಾಣದಿಂದ ಭಂಗಗೊಳಿಸಿದರು. ಇದರಿಂದ ಕುಪಿತನಾದ ಶಿವ, ಮನ್ಮಥನನ್ನು ಅಲ್ಲಿಯೇ ದಹಿಸಿದನು. ನಂತರ ರತಿಯು ನಡೆದ ಘಟನೆ ವಿವರಿಸಿ ಶಿವನಲ್ಲಿ ತನ್ನ ಪತಿಯ ಪ್ರಾಣ ಭಿಕ್ಷೆ ಬೇಡಿ ಅದರ ಫಲ ಪಡೆದಳು. ಹೀಗೆ ಕಾಮದಹನವು ಹೋಳಿ ಹಬ್ಬದ ಸಂಕೇತವಾಗಿದೆ ಎಂದು ಪುರಾಣದ ಕಥೆಯನ್ನು ಹುಟ್ಟುಹಾಕಿದ್ದಾರೆ.

ಈ ಹಬ್ಬದಂದು ಅಕ್ಕಿಹಿಟ್ಟು ಮತ್ತು ಅರಿಶಿಣ ಬೆರೆಸಿ ಗುಲಾಲ್ ತಯಾರಿಸಿ ಬಿದರಿನಿಂದ ಪಿಚಕಾರಿ ತಯಾರಿಸಿ ಬಣ್ಣವನ್ನು ಆಡುವರು. ರಂಗಿನಾಟದ ನಂತರ ಅಭ್ಯಂಜನ ಸ್ನಾನ ಮಾಡಿ ದೇವರಲ್ಲಿ ಪ್ರಾರ್ಥಿಸಿ ಮನೆಗಳಲ್ಲಿ ವಿಶೇಷ ಅಡಿಗೆಗಳನ್ನು ತಯಾರಿಸಲಾಗುತ್ತದೆ. ಉತ್ತರ ಪ್ರದೇಶದಲ್ಲಿ ಜೋಳದ ಹಿಟ್ಟಿನ ಗಂಜಿ, ಪಾಪ್ಡಿ ಬಲು ಜನಪ್ರಿಯವಾಗಿದೆ.

- ದೆಹಲಿಯಲ್ಲಿ ಈ ದಿನದಂದು ಹತ್ತು ತಲೆಯ ರಾವಣನ ಮೂರ್ತಿಯನ್ನು ಬಿದರಿನಿಂದ ತಯಾರಿಸಿ ಅದಕ್ಕೆ ಹಳೇ ಬಟ್ಟೆಗಳನ್ನೆಲ್ಲ ಧರಿಸಿ ಗಣ್ಯರನ್ನೆಲ್ಲ ಕರೆದು ಅವರ ಸಮ್ಮುಖದಲ್ಲಿ ಲಂಕೇಶನನ್ನು ಸುಡುವುದು ವಾಡಿಕೆಯಲ್ಲಿದೆ.
- ಗ್ರಾಮೀಣ ಪ್ರದೇಶದಲ್ಲಿ ಆ ದಿನ ಊರಿನವರ ಮನೆಯಲ್ಲಿ ಸಿಗುವ ಬೇಡದ ವಸ್ತುಗಳನ್ನೆಲ್ಲ ತಂದು ಒಂದೆಡೆ ಗುಡ್ಡೆ ಮಾಡಿ ರಾತ್ರಿ ಹುಡುಗನೊಬ್ಬನಿಗೆ ಶಿಖಂಡಿಯ ವೇಷ ಹಾಕಿಸಿ ಅವನಿಂದ ಆ ಬೇಡದ ವಸ್ತುಗಳ ಗುಡ್ಡೆಗೆ ಬೆಂಕಿ ಇಡಿಸುತ್ತಾರೆ. ಅದೇ ಅಲ್ಲಿ ಕಾಮದಹನ ಹಬ್ಬ.
- ಉತ್ತರ ಕರ್ನಾಟಕದ ಭಾಗಗಳಲ್ಲಿ ಈ ಹಬ್ಬದ ಸಡಗರ ಹೆಚ್ಚು ಕಮ್ಮಿ ಒಂದು ವಾರದ ಮುಂಚೆಯೇ ಪ್ರಾರಂಭವಾಗುತ್ತದೆ. ನಗರ ಪ್ರದೇಶಗಳಲ್ಲಿ ವಿವಿಧ ಬಡಾವಣೆಗಳ ಹದಿಹರೆಯದ ಮಕ್ಕಳೆಲ್ಲರೂ ಸೇರಿ ಸೌದೆ, ಕುಳ್ಳು ಮುಂತಾದವುಗಳನ್ನು ಶೇಖರಿಸುತ್ತಾರೆ. ಬಡಾವಣೆಯ ಎಲ್ಲ ಮನೆಗಳಿಗೆ ಹೋಗಿ ಕಾಮದಹನಕ್ಕಾಗಿ ಚಂದಾ ಪಡೆಯುತ್ತಾರೆ. ಯಾರು ಕೊಡಲು ನಿರಾಕರಿಸುವರೋ ಅವರ ಮನೆ ಮುಂದೆ ನಿಂತು ಜೋರಾಗಿ ಬೊಬ್ಬೆ ಹಾಕುವುದು ವಾಡಿಕೆ ಇದೆ. ನಂತರ ಬಣ್ಣದ ಹಬ್ಬದ ಹಿಂದಿನ ದಿನ ಕಾಮದಹನ ಮಾಡಿ ಮರುದಿನ ಬಣ್ಣದೊಡನೆ ಅದರ ಬೂದಿಯನ್ನು ತೆಗೆದುಕೊಂಡು ಅಬ್ಬರದಿಂದ ಬಣ್ಣದಾಟ ಆಡುವರು.

**ಓಕಳಿ ಹಬ್ಬಕ್ಕೂ ಹಾಗೂ ದೇವದಾಸಿ ಪದ್ಧತಿಗೂ ಇರುವ ಸಂಬಂಧ: ನಿಜವಾದ ಕಥೆ:**

ಹಿಂದೂ ಹೊಸ ವರ್ಷದ ದಿನದ (ಗುಡಿ ಪಾಡವಾ) ಅಂದರೆ ಯುಗಾದಿ ಹಬ್ಬದ ಮುಂಚೆ ಬರುವ ಮೊದಲ ಅಥವಾ ಎರಡನೇ ಶನಿವಾರದಂದು ಬಹುತೇಕ ದಲಿತ ಬಹುಜನರಾಗಿರುವ ದೇವದಾಸಿಯರನ್ನು ಸುಮಾರು 100 ವರ್ಷಗಳ ಹಿಂದೆ ಸಾರ್ವಜನಿಕವಾಗಿ ಬಹಿರಂಗವಾಗಿ ಲೈಂಗಿಕವಾಗಿ ಆನಂದಿಸುತ್ತಿದ್ದರು. ಇದನ್ನು ಈಗ "ಓಕಳಿ" ಎಂಬ ಮತ್ತೊಂದು ಸಂಪ್ರದಾಯದಿಂದ ಬದಲಾಯಿಸಲಾಗಿದೆ. ಇದು 1987 ರ ವರೆಗೂ ರೂಢಿಯಲ್ಲಿತ್ತು. ಇದು "ರಂಗ ಪಂಚಮಿ"ಯಂತಹ ಹಬ್ಬವಾಗಿದೆ. ಊರಿನ ದೇವಸ್ಥಾನದ ಮುಂದೆ ಬಣ್ಣದ ನೀರಿನ ಕೊಳದ ಸುತ್ತಲೂ ಉನ್ನತ ಜಾತಿಯ ಹುಡುಗರು ಸೇರುತ್ತಿದ್ದರು. ಆಗ ಅಲ್ಲಿರುವ ಅಂದರೆ ಆ ಪಟ್ಟಣದಲ್ಲಿರುವ ಯುವ ದೇವದಾಸಿಯರು ಸಾಲಾಗಿ ಅವರ ಮುಂದೆ ನಿಂತು ಕೊಳ್ಳಬೇಕಿತ್ತು. ಆಗ ಉನ್ನತ ಜಾತಿಯ ಹುಡುಗರು ಪ್ರತಿಯೊಬ್ಬರಿಗೂ ಸೀರೆ, ತರ ತರಹದ ಉಡುಗೆಗಳನ್ನು ಹಾಗೂ ಹೂವು, ಹೂವಿನ ಹಾರಗಳನ್ನು ದೇವದಾಸಿಯರಿಗೆ ನೀಡುತ್ತಿದ್ದರು ಹಾಗೂ ಅವುಗಳನ್ನು ದೇವದಾಸಿಯರು ಸ್ವೀಕರಿಸುತ್ತಿದ್ದರು. ದೇವದಾಸಿಯರಿಗೆ ನೀಡಿದಂತಹ ಬಟ್ಟೆಗಳು ತುಂಬಾ ತೆಳುವಾದ, ಸೂಕ್ಷ್ಮವಾದ, ಕಡಿಮೆ

ಪ್ರಮಾಣದ ಹಾಗೂ ಪಾರದರ್ಶಕವಾಗಿರುತ್ತಿದ್ದವು. ಹೀಗೆ ವಾಸ್ತವಿಕವಾಗಿ ಬೆತ್ತಲೆಯಾಗಿ ಕಾಣಿಸಿಕೊಳ್ಳುವ ದೇವದಾಸಿಯರ ಮೇಲೆ ಬಣ್ಣದ ನೀರನ್ನು ಸುರಿಯಲಾಗುತ್ತಿತ್ತು. ಹೀಗೆ ಉನ್ನತ ಜಾತಿಯ ಹುಡುಗರು ದೇವದಾಸಿಯರ ದೇಹವನ್ನು ತಮಗಿಷ್ಟ ಬಂದಂತೆ ಅವರ ದೇಹದ ಜೊತೆ ಆಟ ಆಡುತ್ತಿದ್ದರು ಮತ್ತು ಲೈಂಗಿಕ ಸಂಭೋಗವನ್ನು ಮಾಡುತ್ತಿದ್ದರು. ಅಲ್ಲಿ ನೆರೆದಿರುವಂತಹ ಎಲ್ಲರೂ ಆ ದೃಶ್ಯವನ್ನು ನೋಡಿ ಆನಂದ ಪಡುತ್ತಿದ್ದರು. ಓಕಳಿ ಹಬ್ಬದ ನಿಜವಾದ ಪದ್ಧತಿ ಇದು ಬಿಳಿ ಕಲ್ಲಪ್ಪ ದೇವರ ಹೆಸರಿನಲ್ಲಿ ನಡೆಯುತ್ತಿತ್ತು. ಇದು ನಿಜವಾಗಿ ನಡೆದಿರುವಂತಹ ಸತ್ಯ ಘಟನೆ. ಇದನ್ನು ಉನ್ನತ ಜಾತಿಯವರು ತಮಗೆ ಬೇಕಾದ ಹಾಗೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಅರಿಯದ ನಮ್ಮ ದಲಿತರು ಅವರ ತಾಳಕ್ಕೆ ಕುಣಿಯುತ್ತಿದ್ದಾರೆ.

ಈ ಓಕಳಿ ಹಬ್ಬಕ್ಕೂ ಹಾಗೂ ದೇವದಾಸಿ ಪದ್ಧತಿಗೂ ಸಂಬಂಧವಿದೆ ಎಂದು ಕನ್ನಡದ ಚಲನಚಿತ್ರದ ಮೂಲಕ ಹೊರಹಾಕಿದ್ದಾರೆ. ಆ ಚಲನಚಿತ್ರ ಯಾವುದೆಂದರೆ ಅದುವೇ ಅರಗಿಣಿ. ಕನ್ನಡ ಚಲನಚಿತ್ರ 1995 ರಲ್ಲಿ ಬಿಡುಗಡೆಯಾದ ಈ ಚಿತ್ರ. ನಿರ್ದೇಶಕರು ಪಿ.ಎಚ್. ವಿಶ್ವನಾಥ ಅವರು. ಹೈ ಟೆಕ್ ಕ್ರೀಯೇಷನ್ಸ್‌ರವರ ಬ್ಯಾನರನಲ್ಲಿ ನಿರ್ಮಿಸಿದ ಈ ಚಿತ್ರ. ನಿರ್ಮಾಪಕರು ಬಿ.ಎನ್.ರವಿಕುಮಾರ, ಆರ್.ಪ್ರಕಾಶ ಅವರು. ಈ ಚಿತ್ರದ ನಾಯಕಿಯಾಗಿ ಸುಧಾರಾಣಿಯವರು ಅಭಿನಯಿಸಿದ್ದಾರೆ ಹಾಗೂ ಈ ಚಲನಚಿತ್ರದಲ್ಲಿ ದೇವದಾಸಿಯ ಮಗಳ ಪಾತ್ರವನ್ನು ಅವರು ಅಭಿನಯಿಸಿ ಆ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅರಗಿಣಿ ಕನ್ನಡ ಚಲನಚಿತ್ರದ ಮುಖಾಂತರ ಇಡೀ ಭಾರತೀಯ ಸಮಾಜಕ್ಕೆ ದಲಿತ ಮಹಿಳೆಯರನ್ನು ದೇವದಾಸಿಯರನ್ನಾಗಿ ಹೇಗೆ ಮಾಡುತ್ತಿದ್ದರು ಎಂಬುವುದು ತೋರಿಸಿಕೊಟ್ಟಿದ್ದಾರೆ. ಈ ಚಿತ್ರದಲ್ಲಿ ನಾಯಕಿಗೆ ವಿದ್ಯಾಭ್ಯಾಸ ಮಾಡಲು ತುಂಬಾ ಆಸೆ ಇರುತ್ತದೆ. ಹಾಗಾಗಿ ಅವಳು ಶಾಲೆಗೆ ಹೋಗುತ್ತಿರುತ್ತಾಳೆ. ಓಕಳಿ ಹಬ್ಬದ ದಿನದಂದು ಅವಳು ಶಾಲೆಗೆ ಹೋಗುತ್ತಿರುವಾಗ ದೇವದಾಸಿಯ ಮಗಳಾದ ನಾಯಕಿಯನ್ನು ಆ ಊರಿನ ಗೌಡನು ಅವಳನ್ನು ನೋಡಿ ಅವಳ ಮೇಲೆ ಮನಸ್ಸು ಮಾಡಿ ಅವಳನ್ನು ದೇವದಾಸಿಯನ್ನಾಗಿ ಮಾಡಲು ಅವಳನ್ನು ತುಂಬಾ ಒತ್ತಾಯದಿಂದ ಅವಳನ್ನು ದೇವದಾಸಿಯನ್ನಾಗಿ ಮಾಡಲು ಓಕಳಿಯನ್ನು ಅವಳ ಮೇಲೆ ಎರಚಲಾಗುತ್ತದೆ. ಓಕಳಿ ಬಣ್ಣದಿಂದ ಅವಳ ದೇಹವೆಲ್ಲಾ ಮುಳುಗಿ ಹೋಗುತ್ತದೆ. ಅವಳು ಎಷ್ಟು ಅತ್ತರೂ, ಗೋಗರೆದರೂ ಅವಳ ನೋವು ಯಾರಿಗೂ ಕಾಣದೇ ಅದನ್ನು ನೋಡಿ ಮೇಲ್ಜಾತಿಯವರು ಖುಷಿ ಪಡುತ್ತಿರುತ್ತಾರೆ. ದೇವದಾಸಿ ಪದ್ಧತಿಯು ನಿಮ್ಮ ವಂಶಪರಂಪರೆಯಿಂದ ಬಂದ ಪದ್ಧತಿ, ಇದನ್ನು ಯಾರಿಂದಲೂ ಬದಲಾಯಿಸಲಾಗದು ಎಂದು ಆ ಊರಿನ ಗೌಡ ಹೇಳುತ್ತಾನೆ. ನಾಳೆ ಮುಂಜಾನೆ ದೇವಾಸ್ಥಾನದಲ್ಲಿ ಪೂಜೆ ಮಾಡಿ ದೇವರಿಗೆ ಅರ್ಪಿಸುತ್ತೇವೆ ಎಂದು ಹೇಳಿ ಹೋಗುತ್ತಾನೆ. ಅವಳಿಗೆ ತಾಂಬೂಲವನ್ನು, ತಾಂಬೂಲದ ಜೊತೆಗೆ ಒಂದಿಷ್ಟು ಹಣವನ್ನು ಅವಳ ಕೈಯಲ್ಲಿ ಇಟ್ಟು ಹೋಗುತ್ತಾನೆ. ಮರುದಿನ ಆ ನಾಯಕಿಯನ್ನು ಆ ಗೌಡನ ಹತ್ತಿರ ಕರೆದುಕೊಂಡು ಹೋಗಲು ಎಲ್ಲ ಸಿದ್ಧತೆ ನಡೆಯುತ್ತಿರುತ್ತದೆ. ಆವಾಗ ನಾಯಕಿಯ ತಾಯಿಯು ತನ್ನ ಹಾಗೆ ನನ್ನ ಮಗಳ ಜೀವನ ಆಗಬಾರದು, ಈ ದೇವದಾಸಿ ಪದ್ಧತಿಯು ನನ್ನ ಕಾಲಕ್ಕೆ ಮುಗಿಯಬೇಕು, ನನ್ನೊಂದಿಗೆ ಕೊನೆಯಾಗಲಿ ಎಂದು, ಮುಂದೆ ಹೋಗಬಾರದು, ನನ್ನ ಮಗಳ ಜೀವನ ನನ್ನ ಜೀವನದ ತರಹದ ಹಾಗೆ ಆಗಬಾರದು ಎಂದು ನಾಯಕಿಗೆ ಧೈರ್ಯ ತುಂಬಿ ಅವಳನ್ನು ಊರಿಂದಾ ರಾತ್ರೋ ರಾತ್ರಿ ಅವಳನ್ನು ಊರಿಂದ ಓಡಿಸುತ್ತಾಳೆ. ಇದೆ ಆ ಕಥಾ ಹಂದರ. ಹೀಗೆ ಅರಗಿಣಿ ಚಿತ್ರದ ಮೂಲಕ ದೇವದಾಸಿಯರನ್ನು ಓಕಳಿ ಹಬ್ಬದಲ್ಲಿ ದಲಿತ ಮಹಿಳೆಯರನ್ನು

ಉಪಯೋಗಿಸಿಕೊಳ್ಳಲಾಗುತ್ತಿತ್ತು ಎಂಬುವುದನ್ನು ಈ ಚಿತ್ರದ ಮೂಲಕ ಸಮಾಜಕ್ಕೆ ತೋರಿಸಿದ್ದಾರೆ.

**ದೇವದಾಸಿಯರು ದಬ್ಬಾಳಿಕೆಯ ಒಂದು ರೂಪ:**

ದೇವದಾಸಿಯರ ಕೃತ್ಯವನ್ನು ಮಹಿಳೆಯರನ್ನು ಶಾಶ್ವತ ಅವಲಂಬನೆ ಮತ್ತು ಅಧೀನ ಸ್ಥಿತಿಯಲ್ಲಿಡುವ ಸಾಧನವಾಗಿ ಅಂಬೇಡ್ಕರ್ ಅವರು ನೋಡಿದರು. ಈ ಪದ್ಧತಿ ದೇವದಾಸಿಯರ ಘನತೆ ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಿತ್ತು. ಅವರನ್ನು ಧಾರ್ಮಿಕ ಆಚರಣೆಗಳು ಮತ್ತು ಸಾಮಾಜಿಕ ಸ್ಥಾನಮಾನದ ವಸ್ತುಗಳನ್ನಾಗಿ ಮಾಡಿತು ಎಂದು ಅವರು ವಾದಿಸಿದರು. ಬಿ.ಆರ್. ಅಂಬೇಡ್ಕರ್ ಅವರು ದೇವದಾಸಿಯರ ಪದ್ಧತಿಯನ್ನು ತೀವ್ರವಾಗಿ ಟೀಕಿಸಿದ್ದರು. ಇದನ್ನು ಹಿಂದೂ ಧರ್ಮದ ಪಿತೃಪ್ರಧಾನ ಮತ್ತು ತಾರತಮ್ಯದ ಸ್ವರೂಪದ ಅಭಿವ್ಯಕ್ತಿ ಎಂದು ನೋಡಿದರು. ದೇವದಾಸಿಯರನ್ನು ಮಹಿಳೆಯರನ್ನು ಆಸ್ತಿಗೆ ಇಳಿಸುವಂತೆಯೇ ಬಲವಂತದ ಲೈಂಗಿಕ ಗುಲಾಮರಾಗಿ ಒಂದು ರೂಪವೆಂದು ಅವರು ನೋಡಿದರು ಮತ್ತು ಈ ಪದ್ಧತಿಯನ್ನು ಮುಂದೆವರೆಸಲು ಅವಕಾಶ ನೀಡಿದ ಶ್ರೇಣೀಕೃತ ವ್ಯವಸ್ಥೆಯನ್ನು ಖಂಡಿಸಿದರು. ಅವರ ಟೀಕೆ ಸಮಾನತೆ ಮತ್ತು ಸ್ವಾತಂತ್ರ್ಯ ಆಧರಿಸಿದ ಸಮಾಜದ ವಿಶಾಲ ದೃಷ್ಟಿಕೋನದಿಂದ ಹುಟ್ಟಿಕೊಂಡಿತು, ಅಲ್ಲಿ ವ್ಯಕ್ತಿಗಳು ಯಾವುದೇ ರೀತಿಯ ದೌರ್ಜನ್ಯಕ್ಕೆ ಒಳಗಾಗುವುದಿಲ್ಲ.

**ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಂಬೇಡ್ಕರ್ ಅವರ ಟೀಕೆ:**

ದೇವದಾಸಿಯರ ಕುರಿತಾದ ಅಂಬೇಡ್ಕರ್ ಅವರ ಟೀಕೆಯು ಹಿಂದೂ ಸಾಮಾಜಿಕ ವ್ಯವಸ್ಥೆಯ ಕುರಿತಾದ ಅವರ ವಿಶಾಲ ವಿಮರ್ಶೆಯೊಂದಿಗೆ ಹೆಣೆದುಕೊಂಡಿತ್ತು. ಇದು ಮಹಿಳೆಯರು ಸೇರಿದಂತೆ ಅಂಚಿನಲ್ಲಿರುವ ಗುಂಪುಗಳ ವಿರುದ್ಧ ಅಸಮಾನತೆ, ತಾರತಮ್ಯತೆಯನ್ನು ಶಾಶ್ವತಗೊಳಿಸುತ್ತದೆ ಎಂದು ಅವರು ನೋಡಿದರು. ಹಿಂದೂ ಜಾತಿ ವ್ಯವಸ್ಥೆ ಮತ್ತು ಅದಕ್ಕೆ ಸಂಬಂಧಿಸಿದ ಕಾನೂನುಗಳು ಮಹಿಳೆಯರು ಮತ್ತು ಇತರ ಅಂಚಿನಲ್ಲಿರುವ ಸಮುದಾಯಗಳ ಅಧೀನಕ್ಕೆ ಕೊಡುಗೆ ನೀಡಿವೆ ಎಂದು ಅವರು ನಂಬಿದ್ದರು.

**ಸಮಾನತೆ ಮತ್ತು ಸ್ವಾತಂತ್ರ್ಯದಲ್ಲಿ ಅಂಬೇಡ್ಕರ್ ಅವರ ದೃಷ್ಟಿಕೋನ:**

ನ್ಯಾಯಯುತ ಸಮಾಜದ ಕುರಿತಾದ ಅಂಬೇಡ್ಕರ್ ಅವರ ದೃಷ್ಟಿಕೋನವು ಮಹಿಳೆಯರು ಸೇರಿದಂತೆ ಎಲ್ಲಾ ವ್ಯಕ್ತಿಗಳನ್ನು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಹಕ್ಕಿನೊಂದಿಗೆ ಸಮಾನವಾಗಿ ಪರಿಗಣಿಸುವುದಾಗಿತ್ತು. ಮಹಿಳೆಯರು ಸೇರಿದಂತೆ ಎಲ್ಲಾ ವ್ಯಕ್ತಿಗಳನ್ನು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯ ಹಕ್ಕಿನೊಂದಿಗೆ ಸಮಾನವಾಗಿ ಪರಿಗಣಿಸುವುದಾಗಿತ್ತು. ದೇವದಾಸಿಯರ ಕಾಯ್ದೆಯು ಈ ದೃಷ್ಟಿಕೋನಕ್ಕೆ ಸಂಪೂರ್ಣ ವಿರೋಧಾಭಾಸವಾಗಿದೆ ಮತ್ತು ನಿಜವಾದ ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸಮಾಜವನ್ನು ಸಾಧಿಸಲು ಅದನ್ನು ರದ್ದುಗೊಳಿಸಬೇಕು ಎಂದು ಅವರು ನಂಬಿದ್ದರು.

**ದೇವದಾಸಿಯರ ಕಾಯ್ದೆಯ ಮೇಲಿನ ಪ್ರಭಾವ:**

ದೇವದಾಸಿಯರ ಕಾಯ್ದೆಯ ಬಗ್ಗೆ ಅಂಬೇಡ್ಕರ್ ಅವರ ಆಲೋಚನೆಗಳ ಬಗ್ಗೆ ನೇರ ಉಲ್ಲೇಖವಿಲ್ಲದಿದ್ದರೂ, ಆಚರಣೆ ಮತ್ತು ಹಿಂದೂ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಅವರ ವಿಶಾಲ ಟೀಕೆಯು ಆಚರಣೆಯನ್ನು ರದ್ದುಗೊಳಿಸುವ ಅಂತಿಮ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ರಾಷ್ಟ್ರೀಯ ಮಹಿಳಾ ಆಯೋಗದ ವರದಿಯ ಪ್ರಕಾರ, "ದೇವದಾಸಿಯರಾಗಿ ಮಹಿಳೆಯರ ಶೋಷಣೆ ಮತ್ತು ಅದರ ಸಂಬಂಧಿತ ದುಷ್ಪತನ'' ವರದಿ.

**ಕಾಯ್ದೆಗಳು:**

ದೇವದಾಸಿಯಾಗಿ ಮಹಿಳೆಯರನ್ನು ಸಮರ್ಪಿಸುವುದು ಕಾನೂನುಬಾಹಿರ ಕೃತ್ಯ ಎಂದು ಕಾಯ್ದೆಗಳು ಸ್ಪಷ್ಟವಾಗಿ ಘೋಷಿಸುತ್ತದೆ.

**ಶಿಕ್ಷಾ ನಿಬಂಧನೆಗಳು:**

ದೇವದಾಸಿಯಾಗಿ ಮಹಿಳೆಯರನ್ನು ಸಮರ್ಪಿಸುವುದರಲ್ಲಿ ಭಾಗವಹಿಸುವ ಅಥವಾ ಅದಕ್ಕೆ ಪ್ರಚೋದನೆ ನೀಡುವವರಿಗೆ ಜೈಲು ಶಿಕ್ಷೆ ಮತ್ತು ದಂಡ ಸೇರಿದಂತೆ ಶಿಕ್ಷೆಗಳನ್ನು ವಿಧಿಸುತ್ತದೆ.

**ಪುನರ್ವಸತಿ ಮತ್ತು ಕಲ್ಯಾಣ:**

ದೇವದಾಸಿ ಮಹಿಳೆಯರ ಕಲ್ಯಾಣ, ರಕ್ಷಣೆ ಮತ್ತು ಪುನರ್ವಸತಿಗಾಗಿ ಕಾಯ್ದೆಗಳು ಹೆಚ್ಚಾಗಿ ನಿಬಂಧನೆಗಳನ್ನು ಒಳಗೊಂಡಿರುತ್ತವೆ.

**ರಾಜ್ಯ ನಿರ್ದಿಷ್ಟ ಶಾಸನ:**

ಭಾರತದ ಹಲವಾರು ರಾಜ್ಯಗಳು, ವಿಶೇಷವಾಗಿ ದೇವದಾಸಿ ವ್ಯವಸ್ಥೆ ಪ್ರಚಲಿತದಲ್ಲಿದ್ದ ರಾಜ್ಯಗಳು (ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ) ತಮ್ಮದೇ ಆದ ದೇವದಾಸಿ ಕಾಯ್ದೆಗಳನ್ನು ಜಾರಿಗೆ ತಂದಿವೆ.

**ಕಾಯ್ದೆಗಳ ಉದಾಹರಣೆಗಳು:**

ಮದ್ರಾಸ್ ದೇವದಾಸಿಯರು (ಸಮರ್ಪಣೆ ತಡೆ) ಕಾಯ್ದೆ 1947: ದೇವದಾಸಿಯರ ನಿರ್ಮೂಲನಾ ಕಾಯ್ದೆ ಎಂದೂ ಕರೆಯಲ್ಪಡುವ ಈ ಕಾಯ್ದೆಯನ್ನು ಭಾರತದ ಸ್ವಾತಂತ್ರ್ಯದ ಸ್ವಲ್ಪ ಸಮಯದ ನಂತರ ಪ್ರೆಸಿಡೆನ್ಸಿ ಅಂಗೀಕರಿಸಿತು.

ಕರ್ನಾಟಕ ದೇವದಾಸಿಯರು (ಸಮರ್ಪಣೆ ನಿಷೇಧ) ಕಾಯ್ದೆ 1982 : ಈ ಕಾಯ್ದೆಯು ಈ ಪದ್ಧತಿಯನ್ನು ಅಪರಾಧೀಕರಿಸುತ್ತದೆ ಮತ್ತು ಕರ್ನಾಟಕದಲ್ಲಿ ದೇವದಾಸಿಯರ ಮಹಿಳೆಯರ ಪುನರ್ವಸತಿ ಮತ್ತು ರಕ್ಷಣೆಯನ್ನು ಒದಗಿಸುತ್ತದೆ.

ಆಂಧ್ರಪ್ರದೇಶ ದೇವದಾಸಿಯರು (ಸಮರ್ಪಣೆ ನಿಷೇಧ) ಕಾಯ್ದೆ 1988 : ಈ ಕಾಯ್ದೆಯು ಆಂಧ್ರಪ್ರದೇಶದಲ್ಲಿ ದೇವದಾಸಿಯರಂತೆ ಮಹಿಳೆಯರನ್ನು ಸಮರ್ಪಿಸುವುದನ್ನು ಇದೇ ರೀತಿ ನಿಷೇಧಿಸಿದೆ.

ಮಹಾರಾಷ್ಟ್ರ ದೇವದಾಸಿಯರ ವ್ಯವಸ್ಥೆ (ಸಮರ್ಪಣೆ) ಕಾಯ್ದೆ 2005 : ಈ ಕಾಯ್ದೆಯು ಇತರ ವಿಷಯಗಳ ಜೊತೆಗೆ, ದೇವದಾಸಿಯರು ನಡೆಸುವ ವಿವಾಹಗಳ ಕಾನೂನುಬದ್ಧತೆ ಮತ್ತು ಅವರ ಸಂತತಿಯ ಕಾನೂನುಬದ್ಧತೆಯನ್ನು ಗುರುತಿಸುತ್ತದೆ.

**ಉಪಸಂಹಾರ:**

ದೇವದಾಸಿ ಪದ್ಧತಿ ಯಾವ ಮಹತ್ವದ ಉದ್ದೇಶಗಳನ್ನಿಟ್ಟುಕೊಂಡು ಹುಟ್ಟಿತೋ ಆ ಉದ್ದೇಶಗಳೆಲ್ಲ ಈಗ ನಿರ್ನಾಮವಾಗಿ ಹೋಗಿವೆ. ಈಗ ಈ ವೃತ್ತಿ ತನ್ನ ಗೌರವವನ್ನು ಕಳೆದುಕೊಂಡು ವೇಶ್ಯಾವೃತ್ತಿ ಎನ್ನುವಷ್ಟರ ಮಟ್ಟಿಗೆ ಹದಗೆಟ್ಟಿದೆ. ಕಲೆ ಹಾಗೂ ದೇವರ ಹೆಸರಿನಲ್ಲಿ ವಿಷಯಸುಖವನ್ನು ಪ್ರಧಾನ ಮಾಡಿಸಿಕೊಂಡು ಬೆಳೆದು ನಿಂತ ಈ ಪದ್ಧತಿಯನ್ನು ಜನತೆಯೇ ಮೂಲೋಚ್ಚಾಟನೆಗೊಳಿಸಲು ಸಿದ್ಧವಾಯಿತು. 1934 ರಲ್ಲಿ ಭಾರತೀಯ ದಂಡ ಸಂಹಿತೆಯ 373 ಮತ್ತು 375 ರ ವಿಧಿಗಳನ್ನು ದೇವದಾಸಿ ಪದ್ಧತಿಯ ಮೇಲೂ ಅನ್ವಯಿಸುವ ದಿಶೆಯಲ್ಲಿ ಸಂಶೋಧನೆ ನಡೆಸಿತು. 1937 ರಲ್ಲಿ ಮದ್ರಾಸ್ ವಿಧಾನ ಪರಿಷತ್

ದೇವದಾಸಿಯರನ್ನು ದಾಸ್ಯದಿಂದ ಮುಕ್ತಗೊಳಿಸುವ ಸಲಹೆ ನೀಡಲಾಯಿತು. ಆ ಬಳಿಕ ಹಿಂದೂ ದೇವಾಲಯಗಳಲ್ಲಿ ಸ್ತ್ರೀಯರನ್ನು ಸೇವೆಗಾಗಿ ಅರ್ಪಿಸುವ ಪದ್ಧತಿಯನ್ನು ಕಾನೂನಿನಿಂದ ಕೊನೆಗೊಳಿಸುವ ಕ್ರಮವನ್ನು ಕೈಗೊಳ್ಳಲಾಯಿತು. ಅಲ್ಲದೇ ದೇವದಾಸಿಯರಾಗಿ ಕೆಲಸ ಮಾಡುತ್ತಿದ್ದ ಸ್ತ್ರೀಯರಿಗೆ ವಿಧಿಸಮ್ಮತ ವಿವಾಹಕ್ಕೆ ವ್ಯವಸ್ಥೆಗಳನ್ನು ಏರ್ಪಡಿಸಿತು. ಭಾರತದ ಇತರ ಸಂಸ್ಥೆಗಳು ಈ ಕ್ರಮವನ್ನು ಜರೂರಾಗಿ ಅನುಸರಿಸಲು ಮುಂದೆ ಬಂದವು. ಹೀಗಿದ್ದರೂ ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗಿಲ್ಲ. ಇದರ ಚಿಹ್ನೆಗಳು ಈಗಲೂ ಉಳಿದಿವೆ. ಏಕೆಂದರೆ ಈ ಪದ್ಧತಿಗಿರುವ ಧಾರ್ಮಿಕ ಪರಿವೇಷ ಇದನ್ನು ತೊಡೆದುಹಾಕಲು ಕಷ್ಟಸಾಧ್ಯವನ್ನಾಗಿಸಿವೆ. ಮುಂಬಯಿಯಂತಹ ಮಹಾ ನಗರದಲ್ಲಿರುವ ಕೆಂಪುದೀಪದ ಬಡಾವಣೆಯಲ್ಲಿ ನಡೆಸಿದ ಸಮಾಜಶಾಸ್ತ್ರೀಯ ಸರ್ವೇಕ್ಷಣದಿಂದ ಅಲ್ಲಿರುವ ವೇಶ್ಯೆಯರಲ್ಲಿ 1/3 ಪಾಲು ವೇಶ್ಯೆಯರು ದೇವದಾಸಿಯರಾಗಿದ್ದವರೆಂದು ತಿಳಿದುಬಂದಿದೆ.

**ಪರಾಮರ್ಶನ ಗ್ರಂಥಗಳು:**


1. Baritwal, Bijay K. "Dr. Ambedkar's quest for Gender Equality it's relevance in Contemporary Feminist discourse". Online International Inter Disciplinary Research Journal, 2014, vol.iv, no.2.
2. Milind Ubale. "Dr. Babasaheb Ambedkars Approach to women's empowerment". International Educational and Research Journal (IERJ), 2016, vol.2., no.6, pp.1–3
3. http://https://www.google.com/search?q=timesofindia.indiatime.com
4. https://drambedkarbooks.com
5. Keer, Dhananjaya (1991), Dr. Ambedkar Life and Mission, Popular Prakashan, Bombay.
6. Ambedkar, B.R. (1979), Dr. Babasaheb Ambedkar: Writings and Speeches, Vol.1 (compiled by Vasant Moon), Education Department, Government of Maharashtra, Bombay.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.